## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.31/2020

| | | | |
|---|---|---|---|
| ಸಾಕ್ಷಿದಾರರ ಹೆಸರು | ಮುತ್ತನಗೌಡ ಮಲ್ಲನಗೌಡ್ರ | ಸಿಡಬ್ಲ್ಯೂ | 1 |
| ತಂದೆ ಹೆಸರು | ಮಲ್ಲನಗೌಡ | ಪಿಡಬ್ಲ್ಯೂ | 3 |
| ವಯಸ್ಸು | 71 ವರ್ಷ | | |
| ಉದ್ಯೋಗ | ನಿವೃತ್ತ ಸರ್ಕಾರಿ ಉದ್ಯೋಗಿ | | |
| ವಾಸಸ್ಥಳ | ರಾಣೇಬೆನ್ನೂರ | | |

**ದಿಃ 14.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃಹಿ.ಸ.ಸ.ಅಭಿಯೋಜಕರಿಂದ.**

1). ನನಗೆ ಚಾ.ಸಾ-2 ರಿಂದ 4 ಪರಿಚಯ ಇರುತ್ತಾರೆ. ದಿನಾಂಕಃ 29.07.2019 ರಂದು ಹಾವೇರಿಯ ದಾನೇಶ್ವರಿ ನಗರದಲ್ಲಿ ಇರುವಂತಹ ಕರ್ನಾಟಕ ರಾಜ್ಯ ಬೀಜ ನಿಗಮದ ಕಛೇರಿಯ ಮುಂದೆ ನನಗೆ ಸೇರಿದಂತಹ ಮೋಟಾರ ಸೈಕಲನ್ನು ನಿಲ್ಲಿಸಿ ನಂತರ ಸದರಿ ಕಛೇರಿಯ ಒಳಗಡೆ ಅಲ್ಲಿ ಇದ್ದಂತಹ ಚಾ.ಸಾ-4 ಇವರಿಗೆ ಬೇಟಿಯಾಗಿ ಮಾತುಕತೆ ನಡೆಯಿಸಿ ನಂತರ ಮಧ್ಯಾಹ್ನ 2-30 ಘಂಟೆ ಸಮಯಕ್ಕೆ ಸದರಿ ಕಛೇರಿಯಿಂದ ಹೊರಗಡೆ ಬಂದು ನೋಡಿದಾಗ ನಾನು ಕಛೇರಿಯ ಎದುರುಗಡೆ ನಿಲ್ಲಿಸಿದ ಮೋಟಾರ ಸೈಕಲ ಕಳ್ಳತನವಾಗಿರುತ್ತದೆ. ನನಗೆ ಸೇರಿದ ಮೋಟಾರ ಸೈಕಲ ನೊಂದಣಿ ಸಂಖ್ಯೆ ಕೆಎ-27/ಇಹೆಚ್-7528 ಅಂತಾ ಇರುತ್ತದೆ. ಸದರಿ ನನಗೆ ಸೇರಿದಂತಹ ಮೋಟಾರ ಸೈಕಲ ಹಿರೋಹೊಂಡಾ ಸ್ಲೆಂಡರ್ ಕಂಪನಿಗೆ ಸೇರಿದ್ದು ಆಗಿತ್ತು. ನನಗೆ ಸೇರಿದ ಮೇಲೆ ಹೇಳಿದಂತಹ ಮೋಟಾರ ಸೈಕಲ ಕಳ್ಳತನವಾದಾಗ ಅದರ ಅಂದಾಜು ಕಿಮ್ಮತ್ತು ರೂ.60,000/- ಗಳು ಆಗಿತ್ತು.

ಸಿ.ಡಬ್ಲೂ-1, ಪಿ.ಡಬ್ಲೂ-3

2) ನನಗೆ ಸೇರಿದ ಮೋಟಾರ ಸೈಕಲ ಕಳ್ಳತನವಾಗಿದ್ದರ ಕುರಿತಾಗಿ ನಾನು ಹಾವೇರಿಯ ಶಹರ ಪೊಲೀಸ ಠಾಣೆಗೆ ಹೋಗಿ ಪಿರ್ಯಾದಿಯನ್ನು ಕೊಟ್ಟಿದ್ದೇನೆ. ನಂತರ ದಿನಾಂಕಃ 03.08.2019 ರಂದು ಪೊಲೀಸರು ನನ್ನ ಮೋಟಾರ ಸೈಕಲ ಕಳ್ಳತನವಾದ ಜಾಗದಲ್ಲಿ ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿ ನನ್ನನ್ನು ವಿಚಾರಣೆ ಮಾಡಿ ನನ್ನ ಸಮಕ್ಷಮ ಪೊಲೀಸರು ಘಟನಾ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 2-30 ಘಂಟೆಯಿಂದ 3-15 ಘಂಟೆಯವರೆಗೆ ಪಂಚರ ಸಮಕ್ಷಮ ಜರುಗಿಸಿರುತ್ತಾರೆ. ಪೊಲೀಸರು ನನ್ನ ಮೋಟಾರ ಸೈಕಲ ಕಳ್ಳತನವಾದಂತಹ ಸ್ಥಳಕ್ಕೆ ಕರೆದುಕೊಂಡು ಹೋದಾಗ ನನ್ನ ಜೊತೆಯಲ್ಲಿ ಪೊಲೀಸರು ಚಾ.ಸಾ-2 ಮತ್ತು 3 ಇವರನ್ನು ಸಹ ಜೊತೆಗೆ ಕರೆದುಕೊಂಡು ಬಂದಿರುತ್ತಾರೆ.

3) ನನ್ನ ಮೋಟಾರ ಸೈಕಲ ಕಳ್ಳತನವಾದ ಬಳಿಕ ನಾನು ಹಾವೇರಿಯ ಶಹರ ಪೊಲೀಸ ಠಾಣೆಯಲ್ಲಿ ಪಿರ್ಯಾದಿ ಕೊಟ್ಟ ಬಳಿಕ ಇಲ್ಲಿಯವರೆಗೆ ನನಗೆ ಸೇರಿದ ಮೋಟಾರ ಸೈಕಲ್ ಸಿಕ್ಕಿರುವದಿಲ್ಲ. ಆ ಬಳಿಕ ಹಾವೇರಿಯ ಶಹರ ಪೊಲೀಸ ಠಾಣೆಯ ಪೊಲೀಸರು ದಿನಾಂಕಃ 17.12.2019 ರಂದು ಪೊಲೀಸರು ನನಗೆ ಹಾವೇರಿಯ ಶಹರ ಪೊಲೀಸ ಠಾಣೆಗೆ ಕರೆಯಿಸಿ ನನ್ನ ಸಮಕ್ಷಮ 4 ಜನ ವ್ಯಕ್ತಿಗಳನ್ನು ತೋರಿಸಿರುತ್ತಾರೆ ಮತ್ತು ಆ ಸಮಯದಲ್ಲಿ ನನ್ನ ಮೋಟಾರ ಸೈಕಲನ ನೊಂದಣಿ ಪ್ಲೇಟನ್ನು ಸಹ ತೋರಿಸಿರುತ್ತಾರೆ. ಆ ಸಮಯದಲ್ಲಿ ಹಾವೇರಿಯ ಶಹರ ಪೊಲೀಸ ಠಾಣೆಯ ಪೊಲೀಸರು ನನಗೆ ಸೇರಿದಂತಹ ಮೋಟಾರ ಸೈಕಲ ಸಿಕ್ಕಿಲ್ಲ ಅಂತಾ ತಿಳಿಸಿರುತ್ತಾರೆ ಮತ್ತು ಪೊಲೀಸರು ನನಗೆ ಸೇರಿದ ಮೋಟಾರ ಸೈಕಲನ್ನು ಗುಜರಿಗೆ ಹಾಕಿದ ವಿಷಯವನ್ನು ತಿಳಿದುಕೊಂಡಿದ್ದೇನೆ.

4) ಸಾಕ್ಷಿಗೆ ಅವರು ಕೊಟ್ಟಂತಹ ಪಿರ್ಯಾದಿಯನ್ನು ತೋರಿಸಿದ್ದರಿಂದ ಸಾಕ್ಷಿಯು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪೊಲೀಸರು

ನನ್ನ ಸಮಕ್ಷಮ ಮತ್ತು ಸಾಕ್ಷಿದಾರರ ಸಮಕ್ಷಮ ಮಾಡಿದಂತಹ ಘಟನಾ ಸ್ಥಳವನ್ನು ತೋರಿಸಲಾಗಿ ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಸಾಕ್ಷಿದಾರರು ಒಪ್ಪಿದ್ದರಿಂದ ಅದನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸರು ನನಗೆ ತೋರಿಸಿದಂತಹ ನನ್ನ ಕಳ್ಳತನವಾದಂತಹ ಮೋಟಾರ ಸೈಕಲನ ನಂಬರ ಪ್ಲೇಟನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ನಂಬರಪ್ಲೇಟನ್ನು ತನಿಖಾಧಿಕಾರಿಯು ಇಲ್ಲಿಯವರೆಗೆ ಹಾಜರುಪಡಿಸಿರುವದಿಲ್ಲ. ಪೊಲೀಸರು ನನಗೆ ಹಾವೇರಿಯ ಶಹರ ಪೊಲೀಸ ಠಾಣೆಯಲ್ಲಿ ತೋರಿಸಿದ ವ್ಯಕ್ತಿಗಳನ್ನು ಈಗ ನ್ಯಾಯಾಲಯದ ಮುಂದೆ ಇರುವದನ್ನು ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳೇ ನನಗೆ ಪೊಲೀಸ ಠಾಣೆಯಲ್ಲಿ ತೋರಿಸಿದಂತಹ ವ್ಯಕ್ತಿಗಳಾಗಿರುತಾತರೆ. ಅವರು ಈ ಪ್ರಕರಣದಲ್ಲಿ 4 ರಿಂದ 6 ನೇ ಆರೋಪಿಯಾಗಿರುತ್ತಾರೆ. ಈ ಪ್ರಕರಣದಲ್ಲಿ 1 ಮತ್ತು 2 ನೇ ಆರೋಪಿ ಗೈರು ಹಾಜರಿದ್ದು, ಇವರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇರುವದಿಲ್ಲ ಎಂದು ತಿಳಿಸಿರುತ್ತಾರೆ. 3 ನೇ ಆರೋಪಿ ಮೃತಪಟ್ಟಿರುತ್ತಾರೆ. ಈ ಪ್ರಕರಣದಲ್ಲಿ ಘಟನಾ ಸ್ಥಳದಲ್ಲಿ ತೆಗೆದಂತಹ ಒಂದು ಪೋಟೋವನ್ನು ನಿ.ಪಿ-4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಂ.ಸಿ.ಬಿ ವಕೀಲರಿಂದಃ 1 ನೇ ಆರೋಪಿ ಪರವಾಗಿಃ**

5) ಚಾ.ಸಾ-2 ಮತ್ತು 3 ನನ್ನ ಮಗನಾದ ಚಾ.ಸಾ-4 ಈತನು ಕೆಲಸ ಮಾಡುವ ಇಲಾಖೆಯಲ್ಲಿ ಅವರು ಸಹ ಕೆಲಸ ಮಾಡಿಕೊಂಡು ಬರುತ್ತಿದ್ದರು ಅಂದರೆ ಸರಿ. ಚಾ.ಸಾ-2 ಮತ್ತು 3 ಇವರನ್ನು ನನ್ನ ಮಗನಾದ ಚಾ.ಸಾ-4 ಆತನೇ ಸ್ವತಃ ಘಟನಾ ಸ್ಥಳಕ್ಕೆ ಪಂಚರಾಗಿ ಬರಲು ಕೇಳಿ ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿರುತಾತನೆ ಅಂದರೆ ಸರಿಯಲ್ಲ. ಪೊಲೀಸರು ಚಾ.ಸಾ-2 ಮತ್ತು 3 ಇವರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾವೇರಿಯ ಕರ್ನಾಟಕ ರಾಜ್ಯ ಬೀಜ ನಿಗಮದ ಇಲಾಖೆ ಹಾವೇರಿಗೆ ಯಾವ ಕೆಲಸಕ್ಕಾಗಿ ಅಲ್ಲಿ ಹೋಗಿದ್ದೆ ಎಂದು ನನ್ನ ಪಿರ್ಯಾದಿಯಲ್ಲಿ ಬರೆಯಿಸಿಲ್ಲ ಅಂದರೆ ಸರಿ. ನಾನು ಈ

ಪ್ರಕರಣದಲ್ಲಿ ಹೇಳಿದಂತಹ ಘಟನೆ ಆದಾಗ ಹಾವೇರಿಗೆ ಮಧ್ಯಾಹ್ನ 1-00 ಘಂಟೆಗೆ ಬಂದಿದ್ದೇನು.

6) ನಾನು ಹಾವೇರಿಯಲ್ಲಿ ಇರುವಂತಹ ಕರ್ನಾಟಕ ರಾಜ್ಯ ಬೀಜ ನಿಗಮ ಇಲಾಖೆಗೆ ಹೋದಾಗ ಆಗ ಸಮಯ ಅಂದಾಜು 1-45 ಘಂಟೆ ಆಗಿತ್ತು. ನಾನು ಈ ಘಟನೆ ನಡೆದಾಗ ಘಟನಾ ಸ್ಥಳದಲ್ಲಿ ನಿಲ್ಲಿಸಿದಂತಹ ನನ್ನ ಮೋಟಾರ ಸೈಕಲನ ಚೆಕ್ಕಬಂದಿಯನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಹೇಳಲು ಬರುವದಿಲ್ಲ. ಚಾ.ಸಾ-4 ನನ್ನ ಮಗನಾದ ಮಹೇಶ ಈತನನ್ನು ಹಾವೇರಿಯ ಕರ್ನಾಟಕ ಬೀಜ ನಿಗಮ ಕಛೇರಿಯಲ್ಲಿ ಬೇಟಿಯಾಗಿ ಮಾತನಾಡಿ ಹೊರಗೆ ಬರುವಾಗ ಮಧ್ಯಾಹ್ನ 2-30 ಘಂಟೆ ಸಮಯ ಆಗಿತ್ತು. ಸದರಿ ಕಛೇರಿಯಲ್ಲಿ ನನ್ನ ಮಗನಾದ ಮಹೇಶ ಚಾ.ಸಾ-4 ಈತನ ಜೊತೆ 45 ನಿಮಿಷ ಕಛೇರಿಯ ಒಳಗಡೆ ಮಾತನಾಡಿಕೊಂಡು ಇದ್ದೇನು. ಈ ಪ್ರಕರಣದಲ್ಲಿ ಹೇಳಿದಂತಹ ಘಟನೆ ನಡೆದಾಗ ನಾನು ಹಾವೇರಿಯಲ್ಲಿರುವ ಕರ್ನಾಟಕ ರಾಜ್ಯ ಬೀಜ ನಿಗಮ ಕಛೇರಿಗೆ ಮಧ್ಯಾಹ್ನ 1-30 ಘಂಟೆಗೆ ಕಛೇರಿಯ ಎದುರಗುಡೆ ನನ್ನ ಮೋಟಾರ ಸೈಕಲ ನಿಲ್ಲಿಸಿ ಚಾ.ಸಾ-4 ಇವರನ್ನು ಬೇಟಿಯಾಗಲು  ಹೋಗಿದ್ದೆ ಎಂದು ಸುಳುಳ ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿದಂತಹ ಘಟನೆ ನಡೆಯುವಂತಹ ಸ್ಥಳದಲ್ಲಿ ಇದ್ದಂತಹ ಕರ್ನಾಟಕ ರಾಜ್ಯ ಬೀಜ ನಿಗಮದ ಹೊರಗಡೆ ಸಾಕಷ್ಟು ಜನಸಂದಣಿ ಇರುತ್ತದೆ ಅಂದರೆ ಸರಿ.

7) ನನ್ನ ಮೋಟಾರು ಸೈಕಲ ಕಳ್ಳತನವಾದ ಸ್ಥಳದಲ್ಲಿ ಸಾಕಷ್ಟು ಜನಸಂದಣಿ ಇದ್ದರೂ ಸಹ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮಗನಾದ ಚಾಸಾ-4 ಮಹೇಶ ಈತನು ಕೆಲಸ ಮಾಡುತ್ತಿದ್ದ ಹಾವೇರಿಯಲ್ಲಿರುವ ಕರ್ನಾಟಕ ರಾಜ್ಯ ಬೀಜ ನಿಗಮ ಕಛೇರಿಯಲ್ಲಿ ಒಳಗಡೆ ಮತ್ತು ಹೊರಗಡೆ ಸಿ.ಸಿ ಕ್ಯಾಮರಾ  ಇರುತ್ತದೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ನಾನು ನನ್ನ ಮಗನಾದ ಚಾ.ಸಾ-4 ಮಹೇಶ ಈತನು ಕೆಲಸ ಮಾಡುತ್ತಿದ್ದ ಇಲಾಖೆ ಕಛೇರಿಯಿಂದ ಮಧ್ಯಾಹ್ನ 2-30 ಘಂಟೆಗೆ ಹೊರಗಡೆ ಬಂದು ನೋಡಿದಾಗ ಅಲ್ಲಿ ಮೋಟಾರ ಸೈಕಲ ಕಾಣಿಸದೇ ಇದ್ದಾಗ ನಾನು ಆ ಕೂಡಲೇ ನನ್ನ ಮಗನಾದ ಮಹೇಶ ಈತನನ್ನು ಆತನು ಕೆಲಸ ಮಾಡುತ್ತಿದ್ದ

ಕಛೇರಿಯಿಂದ ಹೊರಗಡೆ ಕರೆಯಿಸಿರುತ್ತೇನೆ. ಆಗ ಮಧ್ಯಾಹ್ನ ಸಮಯ 2-30 ಘಂಟೆ ಆಗಿತ್ತು. ನನ್ನ ಮೋಟಾರ ಸೈಕಲ ಕಳ್ಳತನವಾಗಿರುವದು ನನಗೆ ಕಂಡು ಬಂದ ನಂತರ ನಾನು ಮತ್ತು ನನ್ನ ಮಗನಾದ ಚಾ.ಸಾ-4 ಮಹೇಶ ಇಬ್ಬರೂ ಹಾವೇರಿಯ ಬಸನಿಲ್ದಾಣ ಹಾಗೂ ಅದರ ಸುತ್ತಮುತ್ತಲಿನ ಸ್ಥಳದಲ್ಲಿ ನನ್ನ ಮೋಟಾರ ಸೈಕಲ ಇರುವದನ್ನು ನೋಡಿಕೊಂಡು ಮತ್ತು ಆ ಕುರಿತಾಗಿ ಅದು ಆ ಸ್ಥಳದಲ್ಲಿ ಇರದೇ ಇರುವದು ಖಚಿತಪಡಿಸಿಕೊಂಡು ನಂತರ ಮರಳಿ ಬಂದಿರುತ್ತೇವೆ.

8) ಆ ರೀತಿ ನಮ್ಮ ಮೋಟಾರ ಸೈಕಲನ್ನು ಹುಡುಕಾಡಿ ನಾನು ಮತ್ತು ಚಾ.ಸಾ-4 ಮಹೇಶ ಪುನಃ ಕರ್ನಾಟಕ ರಾಜ್ಯ ಬೀಜ ನಿಗಮ ಹಾವೇರಿ ಕಛೇರಿಗೆ ಸಾಯಂಕಾಲ 4-00 ಘಂಟೆಗೆ ಪುನಃ ಬಂದಿರುತ್ತೇವೆ. ಆ ರೀತಿ ನನ್ನ ಮೋಟಾರ ಸೈಕಲ ಕಳ್ಳತನವಾಗಿದ್ದು ನಾನು ಮತ್ತು ನನ್ನ ಮಗ ಚಾ.ಸಾ-4 ಇಬ್ಬರೂ ಕೂಡಿ ಹುಡುಕಾಡಿದರೂ ನನಗೆ ಅದೇ ದಿವಸ ನನ್ನ ಮೋಟಾರ ಸೈಕಲ ಕಳ್ಳತನ ಆಗಿದ್ದರ ಬಗ್ಗೆ ಪೊಲೀಸರಿಗೆ ಪಿರ್ಯಾದಿ ಕೊಡಲು ಯಾವುದೇ ಕಾರಣ ಇರಲಿಲ್ಲ. ನನ್ನ ಮೋಟಾರ ಸೈಕಲ ಕಳ್ಳತನವಾದಾಗ ಅದು ಅಂದಾಜು ರೂ.60,000/- ಬೆಲೆ ಬಾಳುತ್ತಿತ್ತು ಇದೇ ಮೊದಲನೇ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಅಂದರೆ ಸರಿ. ಆದರೆ ಈ ವಿಷಯವನ್ನು ನನ್ನ ಪಿರ್ಯಾದಿಯಲ್ಲಿ ಕಾಣಿಸಿಲ್ಲ ಅಂದರೆ ಸರಿ. ನಾನು ಪಿರ್ಯಾದಿ ಕೊಡುವಾಗ ನನಗೆ ಸೇರಿದ ಮೋಟಾರ ಸೈಕಲ ಕಳ್ಳತನವಾದಾಗ ಅದು ರೂ.60,000/- ಬೆಲೆಬಾಳುತ್ತಿತ್ತು ಎಂದು ನನ್ನ ಪಿರ್ಯಾದಿಯಲ್ಲಿ ಕಾಣಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಅಂದರೆ ಸರಿ.

9) ನನ್ನ ಮಗ ಚಾ.ಸಾ-4 ಮಹೇಶ ಈತನು ಹಾವೇರಿಯ ಕರ್ನಾಟಕ ರಾಜ್ಯ ಬೀಜ ನಿಗಮ ಇಲಾಖೆಯಲ್ಲಿ ಅಟೆಂಡರ ಆಗಿ ಕೆಲಸ ಮಾಡುತ್ತಿದ್ದಾನೆ. ನನ್ನ ಮಗ ಚಾ.ಸಾ-4 ಮಹೇಶ ಈತನು ಕುರುಬಗೊಂಡ ಗ್ರಾಮದಲ್ಲಿ ಇರುತ್ತೇನೆ ಮತ್ತು ನಾನು ರಾಣೇಬೆನ್ನೂರಿನಲ್ಲಿ ಇರುತ್ತೇನೆ. ನನಗೆ ಸೇರಿದ ಮೋಟಾರ ಸೈಕಲ ಕಳ್ಳತನವಾದ ನಂತರ ನಾನು ಮತ್ತು ನನ್ನ ಮಗ ಚಾ.ಸಾ-4 ಮಹೇಶ ಇಬ್ಬರೂ ಸದರಿ ಕಳ್ಳತನವಾದ ದಿನಾಂಕದಿಂದ ಮುಂದೆ 4 ದಿನ ಹುಡುಕಾಡಿ ನೋಡಿರುತ್ತೇವೆ. ನನ್ನ ಮೋಟಾರ ಸೈಕಲ ಕಳ್ಳತನವಾದ ಬಗ್ಗೆ ದಿನಾಂಕಃ

03.08.2019 ರಂದು ಪಿರ್ಯಾದಿಯನ್ನು ಕೊಟ್ಟಿದ್ದೇನೆ. ನಾನು ನನ್ನ ಮೋಟಾರ ಸೈಕಲ ಕಳ್ಳತನವಾದ ದಿನಾಂಕದಿಂದ ಪುನಃ ದಿನಾಂಕಃ 02.08.2019 ರವರೆಗೆ ನಾನು ಪಿರ್ಯಾದಿಯನ್ನು ಕೊಟ್ಟಿರಲಿಲ್ಲ, ಓಕೆಂದರೆ ಅದು ನಾನು ಇನ್ನೂ ಸ್ವಲ್ಪ ದಿನ ಹುಡುಕಾಡಿದರೆ ಸಿಗಬಹುದು ಎಂದು ನಾನು ಪಿರ್ಯಾದಿಯನ್ನು ಕೊಟ್ಟಿರಲಿಲ್ಲ. ಆ ರೀತಿಯಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

10) ನಾನು ದಿನಾಂಕಃ 03.08.2019 ರಂದು ಹಾವೇರಿಯ ಶಹರ ಪೊಲೀಸ ಠಾಣೆಗೆ ಪಿರ್ಯಾದಿ ಸಲ್ಲಿಸಲು ಮಧ್ಯಾಹ್ನ ಅಂದಾಜು 12-00 ಘಂಟೆಗೆ ಹೋಗಿದ್ದೇನೆ. ಪಿರ್ಯಾದಿಯನ್ನು ಸಲ್ಲಿಸಲು ಪೊಲೀಸ ಠಾಣೆಗೆ ನಾನು ಒಬ್ಬನೇ ಹೋಗಿದ್ದೇನು. ನಾನು ಕೊಟ್ಟಂತಹ ಪಿರ್ಯಾದಿಯನ್ನು ಬರೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಮತ್ತು ಅದನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವದಿಲ್ಲ. ಪೊಲೀಸರು ನನ್ನ ಸಹಿಯನ್ನು ಒಂದು ಖಾಲಿ ಹಾಳೆಯ ಮೇಲೆ ಪಡೆದಿರುತ್ತಾರೆ ಅಂದರೆ ಸರಿಯಲ್ಲ, ಏಕೆಂದರೆ ಪೊಲೀಸರು ನಾನು ಹೇಳಿದ ಹಾಗೇ ಪಿರ್ಯಾದಿಯನ್ನು ಬರೆದು ನಂತರ ಅದನ್ನು ಓದಿ ಸಹಿ ಮಾಡಿರುತ್ತೇನೆ. ನಾನು ಕೊಟ್ಟಂತಹ ಪಿರ್ಯಾದಿಯನ್ನು ಹಾವೇರಿ ಶಹರ ಪೊಲೀಸ ಠಾಣೆಯ ಒಬ್ಬ ಪೊಲೀಸ ಪೇದೆ ಬರೆದಿರುತ್ತಾರೆ, ಆತನ ಹೆಸರು ಮತ್ತು ವಿಳಾಸ ಗೊತ್ತಿರುವದಿಲ್ಲ. ನಾನು ಕೊಟ್ಟಂತಹ ಪಿರ್ಯಾದಿಯನ್ನು ಮಧ್ಯಾಹ್ನ 12-30 ಘಂಟೆಯಿಂದ 1-30 ಘಂಟೆಗೆ ಬರೆದಿರುತ್ತಾರೆ.

11) ನಾನು ಕೊಟ್ಟಂತಹ ಪಿರ್ಯಾದಿಯನ್ನು ಪೊಲೀಸರು ಪೆನ್ನಿನಿಂದ ಕೈಯಿಂದ ಬರೆದಿರುತ್ತಾರೆ, ಆದರೆ ಯಾವ ಪೆನ್ನಿನಿಂದ ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ನಾನು ಪಿರ್ಯಾದಿ ಕೊಟ್ಟು ಹೋದ ನಂತರ ಪುನಃ ಪೊಲೀಸರು ನನಗೆ ಸೇರಿದ ಮೋಟಾರ ಸೈಕಲ ನಂಬರ ಪ್ಲೇಟನ್ನು ಸಿಕ್ಕಿದೆ ಎಂದು ಪೊಲೀಸ ಠಾಣೆಗೆ ಕರೆದಿರುತ್ತಾರೆ ಅಂದರೆ ಸರಿ. ಇದನ್ನು ಹೊರತುಪಡಿಸಿ ಮುಂದುವರೆದ ಹೇಳಿಕೆಯನ್ನು ಪಡೆಯಲು ಕರೆದಿರುವದಿಲ್ಲ ಮತ್ತು ಪೊಲೀಸರು ನನಗೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವದಿಲ್ಲ ಅಂದರೆ ಸರಿ. ಪೊಲೀಸರು ನನ್ನನ್ನು ಪೊಲೀಸ ಠಾಣೆಗೆ ಕರೆದಾಗ ನನಗೆ ತೋರಿಸಿದ ವ್ಯಕ್ತಿಗಳು

ಯಾವ ಬಣ್ಣದ ಬಟ್ಟೆಗಳನ್ನು ಹಾಕಿದ್ದರು ಮತ್ತು ಅವರ ಎತ್ತರ ಎಷ್ಟು ಇತ್ತು ಮತ್ತು ಅವರ ಮೈಕಟ್ಟು ಎಷ್ಟು ಇತ್ತು ಎಂದು ಈಗ ನನಗೆ ಹೇಳಲು ಬರುವದಿಲ್ಲ. ಪೊಲೀಸರು ಪೊಲೀಸ ಠಾಣೆಯಲ್ಲಿ ನನಗೆ ಸೇರಿದ ನಂಬರ ಪ್ಲೇಟನ್ನು ತೋರಿಸಿದ್ದು, ಸದರಿ ನಂಬರ ಪ್ಲೇಟ ಈಗ ನ್ಯಾಯಾಲಯದ ಮುಂದೆ ಇರುವದಿಲ್ಲ ಅಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಸಂಪೂರ್ಣ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ. ನನ್ನ ಮೋಟಾರ ಸೈಕಲ ಕಳ್ಳತನ ಆಗಿದ್ದಕ್ಕೂ ಮತ್ತು 1 ನೇ ಆರೋಪಿಗೂ ಯಾವುದೇ ರೀತಿ ಸಂಬಂದ ಇಲ್ಲ ಅಂದರೆ ಸರಿಯಲ್ಲ. ನಾನು ಹೇಳಿದಂತೆ ನನಗೆ ಸೇರಿದ ಮೋಟಾರ ಸೈಕಲ ಕಳ್ಳತನ ಆಗಿರುವದಿಲ್ಲ, ಆದ್ದರಿಂದ ಪೊಲೀಸರು ನನಗೆ ಸೇರಿದ ಮೋಟಾರ ಸೈಕಲನ್ನು ಹುಡುಕಿಲ್ಲ ಅಂದರೆ ಸರಿಯಲ್ಲ. ನಾನು ಕೇವಲ ವಿಮೆ ಪರಿಹಾರ ಪಡೆಯಲು 1 ನೇ ಆರೋಪಿಯ ವಿರುದ್ದ ಸುಳ್ಳು ಪಿರ್ಯಾದಿ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

12) ಪೊಲೀಸರು ನನ್ನ ಮೋಟಾರ ಸೈಕಲ ಕಳ್ಳತನವಾದಂತಹ ಸ್ಥಳದಲ್ಲಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಸಾಕ್ಷದಲ್ಲಿ ನನ್ನ ಸಮಕ್ಷಮ ಮತ್ತು ಸಾಕ್ಷಿದಾರರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಬರೆದಿರುತ್ತಾರೆ ಎಂದು ಮತ್ತು ಒಂದು ಪೋಟೋ ತೆಗೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಘಟನಾ ಸ್ಥಳದ ಪಂಚನಾಮೆಯನ್ನು ಬರೆಯಲು ಪೊಲೀಸರಿಗೆ ನಾನೇ ಸ್ವತಃ ಮಾಹಿತಿ ಕೊಟ್ಟಿದ್ದೇನೆ. ಘಟನಾ ಸ್ಥಳದ ಪಂಚನಾಮೆ ಬರೆದ ನಂತರ ಸಾಕ್ಷಿದಾರರು ಸಹ ಸ್ಥಳದಲ್ಲಿಯೇ ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಘಟನಾ ಸ್ಥಳದ ಪಂಚನಾಮೆ ಬರೆದಿರುತ್ತಾರೆ ಮತ್ತು ಸದರಿ ಪಂಚನಾಮೆಗೆ ನನ್ನ ಸಮಕ್ಷಮ ಸಾಕ್ಷಿದಾರರು ಸಹಿ ಮಾಡಿರುತ್ತಾರೆ, ಆ ಬಳಿಕ ಪೋಟೋವನ್ನು ತೆಗೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

13) ಪೊಲೀಸರು ಘಟನಾ ಸ್ಥಳದ ಪಂಚನಾಮೆಯನ್ನು ಬರೆಯುವಾಗ ಕಚ್ಚಾ ನಕಾಶೆಯನ್ನು ಯಾವ ಉದ್ದೇಶಕ್ಕಾಗಿ ಬರೆದಿರುತ್ತಾರೆ ಮತ್ತು ಆ ಸಮಯದಲ್ಲಿ ತೆಗೆದಂತಹ ಪೋಟೋ ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು

ಹೇಳಲು ಬರುವದಿಲ್ಲ ಅಂದರೆ ಸರಿಯಲ್ಲ. ಘಟನಾ ಸ್ಥಳದ ಪಂಚನಾಮೆಯನ್ನು ಬರೆದ ನಂತರ ನಾನು ಘಟನಾ ಸ್ಥಳದ ಪಂಚನಾಮೆಗೆ ಸಹಿ ಮಾಡಿದ್ದೇನೆ, ಒಂದು ವರದಿಗೆ ಸಹಿ ಮಾಡಿದ್ದೇನೆ , ಆ ಸಮಯದಲ್ಲಿ ತೆಗೆದಂತಹ ಫೋಟೋಕ್ಕೂ ಸಹಿ ಮಾಡಿದ್ದೇನೆ, ಆದರೆ ಒಟ್ಟು ಎಷ್ಟು ದಾಖಲಾತಿಗಳಿಗೆ ಸಹಿ ಮಾಡಿದ್ದೇನೆ ಎಂದು ನನಗೆ ನೆನಪಿರುವದಿಲ್ಲ. 1 ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಅಂದರೆ ಸರಿಯಲ್ಲ. ಏಕೆಂದರೆ ಪೊಲೀಸರು 1 ನೇ ಅರೋಪಿಯನ್ನು ಪೊಲೀಸ ಠಾಣೆಯಲ್ಲಿ ಮತ್ತು ಘಟನಾ ಸ್ಥಳದ ಪಂಚನಾಮೆ ಮಾಡುವಾಗ ಕರೆದುಕೊಂಡು ಬಂದಿದ್ದರು. 1 ನೇ ಆರೋಪಿಯನ್ನು ಪೊಲೀಸರು ಪೊಲೀಸ ಠಾಣೆಯಲ್ಲಿ ಮತ್ತು ಪಂಚನಾಮೆ ಮಾಡುವ ಸ್ಥಳದಲ್ಲಿ ಆತನನ್ನು ಗುರುತಿಸಿ ನನ್ನ ಹೇಳಿಕೆ ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು 1 ನೇ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ವಕೀಲರಾದಂತಹ ಶ್ರೀ.ಪಿ.ಜಿ.ಪಿ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 4 ನೇ ಆರೋಪಿ ಪರ ಅನುಮೋದಿಸಿಕೊಳ್ಳುತ್ತಾರೆ. ಅದೇ ರೀತಿ ಶ್ರೀ.ಎನ್.ಜಿ.ಹೆಚ್ ವಕೀಲರು 2 ನೇ ಅರೋಪಿ ಪರವಾಗಿ 1 ನೇ ಅರೋಪಿ ಪರವಾಗಿ ಮಾಡಿದಂತಹ ಪಾಟೀ ಸವಾಲನ್ನು 2 ನೇ ಅರೋಪಿ ಪರವಾಗಿ ಅನುಮೋದಿಸಿಕೊಳ್ಳುತ್ತಾರೆ.**

**ಪಾಟೀ ಸವಾಲುಃ ಶ್ರೀ.ಸಿ.ಎಂ.ಎಸ್ ವಕೀಲರು 5 ಮತ್ತು 6 ನೇ ಆರೋಪಿ ಪರವಾಗಿ ಯಾವುದೇ ಪಾಟೀ ಸವಾಲು ಇರುವದಿಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.

ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು

ಹಾವೇರಿ.